**ದಿನಾಂಕ: 28 .10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ವಾದಿ ಪರ ವಕೀಲರಿಂದ:**

9. ವಾದಿ ಹಾಗೂ 1 ರಿಂದ 8ನೇ ಪ್ರತಿವಾದಿಗಳ ಮಧ್ಯೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗವಾಗಿರುವುದಾಗಿ ತೋರಿಸಲು ನಿಡಿ-3 ನ್ನು ಹೊರತು ಪಡಿಸಿ ನಾನು ಮತ್ತೆ ಯಾವುದೇ ನೊಂದಾಯಿತ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಸರಿ ಎಂದು ಹಾಗೂ ನಮಗೆ 1ನೇ ಪ್ರತಿವಾದಿ ನೀಡುತ್ತಾರೆಂದು ಹೇಳಿದ್ದರು ಆದರೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನಾನು ಯಾವುದೇ ಬರವಣಿಗೆ ರೂಪದಲ್ಲಿ ಆಗಿರುವ ದಾಖಲೆಯನ್ನು ಸಹ ಹಾಜರು ಪಡಿಸಿಲ್ಲ ಎಂದರೆ ಸರಿ.

10. ನಿಡಿ-3 ರಲ್ಲಿ 1 ರಿಂದ 3ನೇ ಪ್ರತಿವಾದಿಗಳ ಹೆಸರುಗಳನ್ನು ಹೊರತು ಪಡಿಸಿ ಉಳಿದವರ ಅಂದರೆ ವಾದಿ ಹಾಗೂ 4 ರಿಂದ 8ನೇ ಪ್ರತಿವಾದಿಗಳ ಹೆಸರು ಇಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಎಲ್ಲರ ಹೆಸರು ಇರುತ್ತದೆಂದು ನುಡಿಯುತ್ತಾರೆ. ನಿಡಿ-3 ರಲ್ಲಿ ವಾದಿಯ ಹೆಸರು ಇರುವುದಿಲ್ಲ ಎಂದರೆ ಸರಿ. 5 ರಿಂದ 8ನೇ ಪ್ರತಿವಾದಿಗಳ ಹೆಸರು ಸಹ ನಿಡಿ-3 ರಲ್ಲಿ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ವಾದಿ ಹಾಗೂ 1 ರಿಂದ 8ನೇ ಪ್ರತಿವಾದಿಗಳ ಜಂಟಿ ಸ್ವಾಧೀನದ ಸ್ವತ್ತುಗಳು ಎಂದರೆ ಸಾಕ್ಷಿಯು ವಾದಿಯನ್ನು ಹೊರತು ಪಡಿಸಿ 1 ರಿಂದ 8ನೇ ಪ್ರತಿವಾದಿಗಳ ಜಂಟಿ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತುಗಳು ವಾದಿ ಹಾಗೂ 1 ರಿಂದ 8ನೇ ಪ್ರತಿವಾದಿಗಳ ಜಂಟಿ ಸ್ವತ್ತಾಗಿದ್ದರೂ ಸಹಿತ ಈ ವಿಚಾರ ನನಗೆ ಗೊತ್ತಿದ್ದರೂ ಸಹಿತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿ ಹಾಗೂ 1 ರಿಂದ 8ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತು ಎಂದು ನನಗೆ ಗೊತ್ತಿದ್ದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

11. ನಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಬರೆಸಿದ್ದು ಈ ಸಂಬಂಧ ಯಾವುದೇ ದಾಖಲಾತಿಯನ್ನು

ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಿತ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**